ದಿನಾಂಕಃ **06.07.2026**

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ಶ್ರೀ ಜಿ.ಬಿ.ಹೆಚ್.ವಕೀಲರಿಂದಃ</u>

ನಾನು ನಿವೃತ್ತಿ ಹೊಂದಿ 17 ವರ್ಷಗಳ ಆಗಿರುತ್ತದೆ. ಧಾನ ಪತ್ರ ಬರೆದುಕೊಟ್ಟಿರುವ ಬಗ್ಗೆ ಪ್ರಮಾಣ ಪತ್ರ ತಯಾರಿಸಲು ಮಾಹಿತಿ ನೀಡಿರುತ್ತೇನೆ ಚನ್ನಪ್ಪ ಚಿನಕವಜ್ರ ಗ್ರಾಮದಲ್ಲಿ ವಾಸವಾಗಿದ್ದರು. ಚನ್ನಪ್ಪ ಬೆಂಗಳೂರಿನಲ್ಲಿ ವಾಸವಾಗಿರಲಿಲ್ಲ. ನಾನು 1 ನೇ ವಾದಿಯನ್ನು ನೋಡಿರುತ್ತೇನೆ ಅವರ ಮಕ್ಕಳನ್ನು ನೋಡಿರುವುದಿಲ್ಲ. ಧಾನ ಪತ್ರವನ್ನು ಸರ್ವೆ.ನಂಬರ್.16/19 ರಲ್ಲಿ 24 ಗುಂಟೆ, ಸರ್ವೆ.ನಂಬರ್.24/5 ರಲ್ಲಿ 23 ಗುಂಟೆ ಮತ್ತು ಸರ್ವೆ.ನಂಬರ್.23 ರಲ್ಲಿ 5 ಗುಂಟೆಗೆ ಸಂಬಂಧಿಸಿದಂತೆ ಬರೆದಿರುತ್ತಾರೆ. ಸದರಿ ಸ್ವತ್ತುಗಳ ಚೆಕ್ಕುಬಂದಿಯನ್ನು ಹೇಳಲು ಆಗುವುದಿಲ್ಲ. ಸದರಿ ಆಸ್ತಿಗಳಿಗೆ ಸಂಬಂಧಿಸಿದಂತೆ ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತುಗಳಲ್ಲಿ ಕೆಂಪಮ್ಮ ಮತ್ತು ಅವರ ಮಕ್ಕಳು ಸ್ವಾಧೀನದಲ್ಲಿ ಇದ್ದರು ಸಹ ಶಿವಶಂಕರ್ ನನಗೆ ಬರಬೇಕು ಎಂದು ಧಾನ ಪತ್ರ ಮಾಡಿಸಿಕೊಂಡಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ.

2. ಚನ್ನಪ್ಪ ಶಿವಶಂಕರ್ ರವರಿಗೆ 2017 ರಲ್ಲಿ ಧಾನ ಪತ್ರ ಬರೆದುಕೊಟ್ಟಿರುತ್ತಾರೆ ಆದರೆ ದಿನಾಂಕ ಹೇಳಲು ಆಗುವುದಿಲ್ಲ. ಧಾನ ಪತ್ರ ಬರೆಯುವ ಸಮಯಕ್ಕೆ ಅವರು ನಿಮ್ಮನ್ನು ಕರೆದಿರುತ್ತಾರೆಯೇ ಅಥವಾ ನೀವೇ ಹೋಗಿರುತ್ತೀರ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿ ನನ್ನ ಮೊಮಕ್ಕಳಿಗೆ ಆಧಾಯ ಪ್ರಮಾಣ ಪತ್ರ ಮಾಡಿಸುವ ಉದ್ದೇಶದಿಂದ ನಾನೇ ತಾಲ್ಲೂಕು ಕಛೇರಿಯ ಬಳಿ ಹೋಗಿದ್ದೇನು ಎಂದು ಉತ್ತರಿಸುತ್ತಾರೆ. ನಾನು ಹೋಗುವ ವೇಳೆಗೆ ಧಾನ

Kalaiah

06/7/2026

ಪತ್ರ ಬರೆದಿದ್ದರು ಸಾಕ್ಷಿಯು ನನ್ನನ್ನು ಕರೆದು ಸಾಕ್ಷಿಯಾಗಿ ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಪತ್ರ ಬರಹಗಾರರನ್ನು ನಾನು ನೋಡಿರುವುದಿಲ್ಲ ನನ್ನನ್ನು ನೊಂದಣಿ ಕಛೇರಿಯ ಹತ್ತಿರ ಸಾಕ್ಷಿದಾರರಾಗಿ ಕರೆದಿರುತ್ತಾರೆ. ಪತ್ರಕ್ಕೆ ರಂಗಶಾಮಯ್ಯ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ರಂಗಶಾಮಯ್ಯ ಒಂದೇ ಕಡೆ ಸಹಿ ಮಾಡಿರುತ್ತಾರೆ. ರಂಗಶಾಮಯ್ಯ ನನ್ನ ಸಮಕ್ಷಮ ಸಹಿ ಮಾಡಿರುವುದಿಲ್ಲ. ನಾನು ಸಹ ಒಂದು ಕಡೆ ಸಹಿ ಮಾಡಿರುತ್ತೇನೆ. ಚನ್ನಪ್ಪ ಛಾಪಾ ಕಾಗದದ ಮೇಲೆ ನಾಲ್ಕು ಕಡೆ ಸಹಿ ಮಾಡಿರುತ್ತಾರೆ. ಛಾಪಾ ಕಾಗದದ ಮುಖ ಬೆಲೆ ನಾನು ನೋಡಿರುವುದಿಲ್ಲ. ನಮ್ಮೊಂದಿಗೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

3. 2017 ರಲ್ಲಿ ಚನ್ನಪ್ಪರವರಿಗೆ ಎಷ್ಟು ವಯಸ್ಸಾಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ.ಚನ್ನಪ್ಪ ಕನ್ನಡ ಭಾಷೆಯಲ್ಲಿ ಸಹಿ ಮಾಡಿರುತ್ತಾರೆ. ಚನ್ನಪ್ಪ ಮಾನಸಿಕ ಅಸ್ವಸ್ಥನಾಗಿದ್ದನು ಎಂದು ಸೂಚಿಸುವುದು ಸರಿಯಲ್ಲ. ಪ್ರತಿವಾದಿ ನಿಮ್ಮೊಂದಿಗೆ ತುಂಬಾ ವಿಶ್ವಾಸದಿಂದ ಇರುತ್ತಾನೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ನಮ್ಮ ಊರಿಗೆ ಬಂದಾಗಿನಿಂದ ನನ್ನೊಂದಿಗೆ ವಿಶ್ವಾಸದಿರಿಂದ ಇರುತ್ತಾನೆ ನಮ್ಮ ಮನೆಯ ಪಕ್ಕದಲ್ಲಿಯೇ ಇರುತ್ತಾನೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿ ಎಷ್ಟು ವರ್ಷಗಳ ಹಿಂದೆ ನಿಮ್ಮ ಊರಿಗೆ ಬಂದಿರುತ್ತಾರೆ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿ ಅವರ ತಾತ ಇದ್ದಾಗಲೇ ಬಂದಿದ್ದರು ಎಂದು ಉತ್ತರಿಸುತ್ತಾರೆ. ಚನ್ನಪ್ಪರವರಿಗೆ ಧಾನ ಪತ್ರ ಬರೆಯುವ ಉದ್ದೇಶ ಮತ್ತು ಜ್ಞಾನ ಇರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ

4. ದಾವಾ ಸ್ವತ್ತುಗಳನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ನಾನು ಮತ್ತು ಪ್ರತಿವಾದಿ ಶಾಮಿಲ್ ಆಗಿ ಧಾನ ಪತ್ರ ಸೃಷ್ಟಿ ಮಾಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ ದಾವಾ ಸ್ವತ್ತುಗಳ ಸ್ವಾಧೀನ ನೀಡಿದ್ದನ್ನು ಮತ್ತು ಪ್ರತಿವಾದಿ ದಾವಾ ಸ್ವತ್ತುಗಳ ಸ್ವಾಧೀನದಲ್ಲಿ

Kalaiah

06/7/2026

ಪಡೆದುಕೊಂಡಿದ್ದನ್ನು ನಾನು ನೋಡಿರುವುದಿಲ್ಲ. ಸಾಕ್ಷಿ ಮುಂದುವರೆದು ಖಾತೆ ಆಗಿರುತ್ತದೆ ಎಂದು ಉತ್ತರಿಸುತ್ತಾರೆ. ನಾನು ಪತ್ರ ಬರಹಗಾರರು ಪ್ರತಿವಾದಿ ಶಾಮಿಲ್ ಆಗಿ ಧಾನ ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲಪ್ರತಿವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

Kataiah

06/7/2026.

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ